Rd No B G 155 ಶ್ರೀ 7-3-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಹಾಜನ ವರದಿ ಜಾರಿಗೆ ಡಾ. ರಾವ್‌ರವರ ಒತ್ತಾಯ

ಪ್ರಧಾನರಿಗೆ ಕೋರಿಕೆ

ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ಕೇಂದ್ರದಲ್ಲಿ ಮಂತ್ರಿಪದವಿ ಕೊಡಬೇಕೆಂದು ಪ್ರಧಾನರನ್ನು ಕೋರುವ ನಿರ್ಣಯವನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌಡರ ಅಧ್ಯಕ್ಷತೆಯಲ್ಲಿ ಇಂದು ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯಕಾರಿ ಸಮಿತಿ ಅಂಗೀಕರಿಸಿತು.

ಅಂಗೀಕರಿಸಿದ ಮತ್ತೊಂದು ನಿರ್ಣಯದಲ್ಲಿ, ಜನಸಾಮಾನ್ಯರಿಗೆ ಅನುಕೂಲವಾದ ಬಡ್ಜೆಟ್‌ನ್ನು ಕೇಂದ್ರ ಮಂಡಿಸಿದ ಬಗ್ಗೆ ಪ್ರಧಾನರಿಗೆ ಕೃತಜ್ಞತೆ ವ್ಯಕ್ತಪಡಿಸಿತು.

ಶ್ರೇಷ್ಠ ನ್ಯಾಯಾಧೀಶರ ಕರೆ

ಹೈಕೋರ್ಟ್ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು ಹೆಚ್ಚಿಸಬೇಕೆಂದು, ನ್ಯಾಯಾಂಗ ಹೊಂದಿರುವ ಘನತೆಗೆ ತೊಂದರೆ ಆಗುವ ಯಾವುದನ್ನೂ ಸರ್ಕಾರ ಹಾಗೂ ಶಾಸನ ಸಭೆಗಳು ಮಾಡಕೂಡದೆಂದು ಸುಪ್ರೀಂ ಕೋರ್ಟ್‌ನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹಿದಾಯತ್ ಉಲ್ಲ ಅವರು ಬೆಂಗಳೂರಿನಲ್ಲಿ ತಿಳಿಸಿದರು.

○ ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಮುಂದುವರಿಸುವುದಿಲ್ಲವೆಂದು ರಿಜಿಸ್ಟ್ರಾರ್‌ರವರು ತಿಳಿಸಿದ್ದಾರೆ.

ಕಾಮಸೂತ್ರಕ್ಕೆ ನಿಷೇಧ

ಮಾಲವಿಯಲ್ಲಿ ಕಾಮ ಸೂತ್ರವನ್ನು ನಿಷೇಧ ಮಾಡಿರುವುದಾಗಿ ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟವಾಗಿದೆ. ಅಧ್ಯಕ್ಷ ಬಾಂಡಾ ನಿಷೇಧಿಸಿರುವ ಎಪ್ಪತ್ತೆರಡು ಪುಸ್ತಕಗಳ ಪೈಕಿ ಭಾರತದ ಲೈಂಗಿಕ ಪುಸ್ತಕ ಸಹ ಸೇರಿದೆ.

○ ಪ್ಯಾರಿಸ್‌ನಿಂದ ಬಂದಿರುವ ವರದಿಯ ಪ್ರಕಾರ ಫ್ರೆಂಚ್ ಸಬ್‌ಮೆರೀನ್ ಒಂದು ಮುಳುಗಿ ಐವತ್ತೇಳು ಮಂದಿ ಸತ್ತಿರುವ ಭೀತಿ ಇದೆ.

ರಾವ್‌ರ ಒತ್ತಾಯ

ಯಾವುದೇ ಬದಲಾವಣೆ ಇಲ್ಲದೆ ಮಹಾಜನ ಆಯೋಗದ ವರದಿಯನ್ನು ಜಾರಿಗೆ ಕೊಡಬೇಕೆಂದು ಕೇಂದ್ರ ಶಿಕ್ಷಣ ಮಂತ್ರಿ ಡಾ|| ವಿ. ಕೆ. ಆರ್. ವಿ. ರಾವ್‌ರವರು ಪ್ರಧಾನರಿಗೆ ಒತ್ತಾಯಪೂರ್ವಕ ಪತ್ರ ಬರೆದಿರುವರೆಂದು ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ.

ಇದೇ ಸಂಬಂಧದಲ್ಲಿ ಡಾ|| ರಾವ್‌ರವರು ಗೃಹ ಮಂತ್ರಿ ಶ್ರೀ ವೈ. ಬಿ. ಚವಾಣ್ ಮತ್ತು ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಗಜೀವನರಾಂರನ್ನು ಭೇಟಿಮಾಡಿದ್ದರು.

★

ಅಣೆಕಟ್ಟುಗಳು ಈಗ ಇಲ್ಲ

ನದಿ ನೀರಿನ ವಿವಾದದ ಬಗ್ಗೆ ಕೇಂದ್ರ ಪಂಚಾಯಿತಿಯನಿರ್ಧಾರ ಪ್ರಕಟವಾಗುವವರೆಗೆ ಕೃಷ್ಣಾ ಗೋದಾವರಿ ನದಿ ಪಾತ್ರದಲ್ಲಿ ಅಣೆಕಟ್ಟುಗಳ ನಿರ್ಮಾಣಕ್ಕೆ ಮಂಜೂರಾತಿ ನೀಡುವುದಿಲ್ಲವೆಂದು ಬೊಂಬಾಯಿನಲ್ಲಿ ಸಮಾವೇಶವಾಗಿರುವ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ತಿಳಿಸಲಾಯಿತು ಈ ರೀತಿ ಮಹಾರಾಷ್ಟ್ರ ಸರ್ಕಾರಕ್ಕೆ ಯೋಜನಾ ಸಮಿತಿ ತಿಳಿಸಿದೆ.

○

ತೆರಿಗೆ ವಾಪಸು

ಸಾಬೂನು, ಚಿನ್ನ ಬೆಳ್ಳಿ ಆಭರಣಗಳು ಮಂಜಿನ ಗೆಡ್ಡೆ ಈ ಪದಾರ್ಥಗಳ ಮೇಲೆ ವಿಧಿಸಿದ್ದ ತೆರಿಗೆಗಳನ್ನು ವಿಧಾನ ಸಭೆಯಲ್ಲಿ ಕೇರಳ ಹಣಕಾಸು ಮಂತ್ರಿ ಶ್ರೀ ಶೇಷನ್ ವಾಪಸು ಪಡೆದರು.

○ ಅಮೇರಿಕಾ ಕೈಗೊಂಡಿರುವ ನಿರ್ಧಾರದಿಂದ ವೇಶವಿವೆ.ಶಗಳಲ್ಲಿ ಮುನ್ನೂರಿಪ್ಪತ್ತು ಒಂದು ಅಮೆರಿಕಾ ಸೇನೆ ನೆಲೆಗಳು ಮುಗಿಯುವುವು.

ಆಹಾರ ಆಮದು ಬಂದ್

ಮುಂದಿನ ವರ್ಷದ ನಂತರ ಆಹಾರ ಧಾನ್ಯಗಳ ರಿಯಾಯಿತಿ ಆಮದನ್ನು ನಿಲ್ಲಿಸುವುದು ತಮ್ಮ ನಿರೀಕ್ಷೆ ಆಗಿದೆ ಎಂದು ಆಹಾರ ಮತ್ತು ವ್ಯವಸಾಯ ಇಲಾಖೆಯ ಸಹಾಯ - ಮಂತ್ರಿ ಶ್ರೀ ಅಣ್ಣಾಸಾಹೇಬ ಶಿಂಧೆಯವರು ಲೋಕಸಭೆಯಲ್ಲಿ ತಿಳಿಸಿದರು.

★

ಆಕಾಶವಾಣಿಗೆ ವರಮಾನ

ಕಳೆದ ವರ್ಷ ಏಪ್ರಿಲು 1 ರಿಂದ ಜಾರಿಗೆ ಬಂದ ವಾಣಿಜ್ಯ ಪ್ರಸಾರ ಸೇವೆಯಿಂದ ಅಖಿಲ ಭಾರತ ಆಕಾಶವಾಣಿಗೆ ರೂ. 38, 57,308 ವರಮಾನ ಬಂದಿದೆ.

●

ಹಣ ಕೊಡುವುದಿಲ್ಲ

ನಿರುದ್ಯೋಗಿಗಳಿಗೆ ಹಣದ ಸಹಾಯ ಕೊಡಲಾಗುವುದಿಲ್ಲವೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

★

ಪುರಸಭೆ ಅಧಿವೇಶನ

ಈ ತಿಂಗಳು 11 ನೇ ತಾ. ಮಧ್ಯಾಹ್ನ 4 ಘಂಟೆಗೆ ಮೈಸೂರು ಪೌರಸಭೆಯ ಮುಂದುವರಿದ ಅಧಿವೇಶನ ಸಮಾವೇಶ ಆಗುವುದು.

★

ಅರಬ್ ಎಚ್ಚರಿಕೆ

ಇಸ್ರೇಲಿಗೆ ಬೆಂಬಲ ನೀಡುವ ವಿರುದ್ಧ ಅಮೇರಿಕಾಕ್ಕೆ ಅರಬ್ ಗಣ ರಾಜ್ಯ ಎಚ್ಚರಿಕೆ ನೀಡಿದೆ ಎಂದು ಕೈರೋದಿಂದ ವಾರ್ತೆ ಬಂದಿದೆ.

○ ಚಿತ್ರ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡುವ ಉದ್ದಿಶ್ಯ ಸರ್ಕಾರಕ್ಕೆ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ವುಡ್‌ಲ್ಯಾಂಡ್ ಶಿನ ಜನಸಂದಣಿಯು 10ನೇ ವಾರ
ಅಮೋಘ ಪ್ರಾರಂಭ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ

ಅಪೆರಾ— ಅಮೋಘ 2 ವಾರ

.... ಮನಮೋಹಕ ತಮಿಳು ಚಿತ್ರ ....

ಇರು ಕೋಡುಗಳ

ಜೆಮಿನಿ ಗಣೇಶ್, ತಾಯ್ ನಾಗೇಶ್ ಮತ್ತು ಸಾಹುಕಾರ್ ಜಾನಕಿ ಅಭಿನಯ

ಅಗ್ನಿ ಮಂದಿರ

ಅಜರಬೈಜಾನಿನಲ್ಲಿಯ ಹಿಂದೂ ದೇವಾಲಯ ಅತೆಷ್ಯಾಕ್ (ಅಗ್ನಿ ಮಂದಿರ) ಪಲ್ಲಿ ಗರ್ಭಗುಡಿಯಲ್ಲಿ 70 ವರ್ಷಗಳಿಂದ ನಿಂತುಹೋಗಿದ್ದ ಅಗ್ನಿಯ ನಾಲಿಗೆಗಳು ಮತ್ತೆ ಆನಂದದಿಂದ ಕುಣಿದಾಡುತ್ತಿವೆ. ಅಜರಬೈನಿನ ಅಸ್ಸೈರ್ಯ ಪರ್ಯಾಯ ದ್ವೀಪದಲ್ಲಿ 17–18 ನೇ ಶತಮಾನದಲ್ಲಿ ಕಟ್ಟಲಾದ ಈ ದೇವಾಲಯವು ಈಗ ರಾಜ್ಯದ ರಕ್ಷಣೆಯಲ್ಲಿದ್ದು ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಗರ್ಭಗುಡಿಯಲ್ಲಿರುವ ಹಿಂದು ಶಾಸನ ರೀತ್ಯಾ ಈ ದೇವಾಲಯ ಕಟ್ಟಲು ಒಬ್ಬ ಭಾರತೀಯ ವರ್ತಕ ಕಾಂಚನಗಾರ್ ಹಣ ದಾನಾಮಾಡಿದನೆಂದು ತಿಳಿಯಬರುತ್ತದೆ.

●★●

ಮನನಾರ್ಹ ವಿಷಯ

ದುಡಿಯುವನನು ತನ್ನ ಲಾಭಕರವಾದ ಕೆಲಸವನ್ನು ಒಂದೇ ಮನಸ್ಸಿನಿಂದ ಮಾಡುತ್ತಿದ್ದಾನೆ : ಕೂತಿರುವನನು ಅವನ ಲಾಭವನ್ನು ಎಲ್ಲಾ ತನಗೆ ಸಿಗಲುಬರುವುದಕ್ಕೆ ಸರಿಯಾದ ಮಾರ್ಗವನ್ನು ಹುಡುಕುತ್ತಾ ಇದ್ದಾನೆ.

ದ್ವೇಷವು ದ್ವೇಷದಿಂದ ಶಾಂತಿ ಹೊಂದುವುದಕ್ಕೂ ಪ್ರೀತಿಯಿಂದ ಶಾಂತಿ ಹೊಂದುವುದಕ್ಕೂ ವ್ಯತ್ಯಾಸವಿದೆ. ದ್ವೇಷವು ದ್ವೇಷಕ್ಕೆ ಮುಯ್ತೀರಿಸುವುದಾಗಿಯೂ ಪ್ರೀತಿಯು ಪ್ರೀತಿಯಿಂದ ದಾನನೂಡುವುದಾಗಿಯೂ ಇದೆ.

ನೀನು ಮೊದಲು ಗುಣವಂತನನ್ನೂ ಆ ಮೇಲೆ ಹಣವನ್ನೂ ಸಂಪಾದಿಸು. ಹಣವನ್ನು ಸಂಪಾದಿಸಿದ ಮೇಲೆ ಪ್ರಾಯಶಃ ಗುಣವಂತನು ಸಿಕ್ಕುವುದಿಲ್ಲ, ಸಿಕ್ಕಿದರಕೆ ನೀನು ಅವನನ್ನು ದೂರವಾಡಿಬಿಡಬಹುದು. ಯಾಕೆಂದರೆ, ಗುಣವಂತನು ಪುರಸ್ಕಾರಕ್ಕೂ ಹಣವಂತನು ತಿರಸ್ಕಾರಕ್ಕೂ ತೌರುಮನೆಯಾಗಿದ್ದಾರೆ.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಸೈಸೆ; ಅಂಚೇವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1. ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕು
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4

Quality Printing — Neat Binding

Lakshminarasimha Press

Sivarampet, Mysore

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore 4

ದೇಶಕ್ಕೆ ಬೇಕಾಗಿರುವದು
ಆ ಹಾ ರ
ಜಿ.ಇ.ಎಫ್. ಪಂಪು ಸೆಟ್ಟುಗಳು
ಅ ದ ರ ಪ ರಿ ಹಾ ರ
ಅತ್ಯಂತ ಆಧುನಿಕ ಶಾಸ್ತ್ರೀಯ ರೀತಿಯಿಂದ
ತ ಯಾ ರಿ ಸ ಲ್ಪ ಟ್ಟ
ಜಿ. ಇ. ಎಫ್.
ಪಂಪು ಸೆಟ್ಟುಗಳನ್ನು
ಉಪಯೋಗಿಸಿ ಹೆಚ್ಚು ಬೆಳೆಯಿರಿ.
ದೇಶದ ಸಂಪತ್ತನ್ನು ಹೆಚ್ಚಿಸಲು
ಹೆಚ್ಚು ಆಹಾರ ಬೆಳೆಯಲು
ಜಿ.ಇ.ಎಫ್. ಪಂಪುಸೆಟ್ಟುಗಳನ್ನೇ
ಉ ಪ ಯೋ ಗಿ ಸಿ ರಿ.
: ತ ಯಾ ರ ಕ ರು :
ಗೌರ್ನಮೆಂಟ್ ಎಲೆಕ್ಟ್ರಿಕ್
ಫ್ಯಾಕ್ಟರಿ, ಬೆಂಗಳೂರು.
ಬೇ ಡಿ ಕೆ ಗಾ ಗಿ :-
ಮೆ|| ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್,
ನಂ. 36 'ಹರಿನಿವಾಸ್'
ಕನಿಂಗ್‌ಹ್ಯಾಮ್ ರೋಡ್,
ಬೆಂಗಳೂರು-1
ಅವರೊಂದಿಗೆ ವ್ಯವಹರಿಸಿ.

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ